ಶ್ರೀ ಹೆಚ್. ಎಂ. ರೇವಣ್ಣ.—ಹಳೇಗುಡ್ಡದಹಳ್ಳಿ ಬಡಾವಣೆ ಬಹಳ ದೊಡ್ಡ ಬಡಾವಣೆ. ಇದರಲ್ಲಿ ದೇವರಾಜ್ ಅರಸ್ ನಗರ, ವಿನಾಯಕನಗರ ಹಾಗೂ ಪಾದರಾಯನಪುರ ಸೇರಿ ಬಹಳ ಹೆಚ್ಚು ಜನ ಸಾಂದ್ರತೆ ಇದೆ. ಅಲ್ಲಿಗೆ ೫೪(೧) ಬಸ್ಸು ಬೆಳಗ್ಗೆ ೨ ಟ್ರಿಪ್ ಮಾತ್ರ ಓಡುತ್ತಿದೆ. ಬೆಳಿಗ್ಗೆ ೯-೩೦ಕ್ಕೆ ಹಾಗೂ ೧೦-೪೫ಕ್ಕೆ, ಮತ್ತೆ ಸಂಜೆ ೬-೩೦ಕ್ಕೆ ಮಾತ್ರ ಆ ಬಸ್ಸು ಓಡುತ್ತಿದೆ. ಮತ್ತೆ ಆ ಬಸ್ಸು ಓಡುತ್ತಿಲ್ಲ. ಆದರೆ ತಮ್ಮ ಉತ್ತರದಲ್ಲಿ ಅಲ್ಲಿ ಬಸ್ಸು ಓಡುತ್ತಿದೆ ಎಂಬುದಾಗಿ ಕೊಟ್ಟಿರತಕ್ಕ ಮಾಹಿತಿ ಸರಿಯಾದುದಲ್ಲ. ಆ ಬಸ್ಸು ಸರಿಯಾದ ರೀತಿಯಲ್ಲಿ ಓಡಾಡುವಂತೆ ಕ್ರಮ ತೆಗೆದುಕೊಳ್ಳಬೇಕು. ಎರಡನೆಯದಾಗಿ, ಶಿವಾಜಿನಗರಕ್ಕೆ ೧೫ಕ್ಕೂ ಸಂಖ್ಯೆಯ ಬಸ್ಸು ಇದೆ. ಅದು ಬೆಳಗ್ಗೆ ೯-೧೫ಕ್ಕೆ ಮಾತ್ರ ಒಂದು ಟ್ರಿಪ್ ಓಡುತ್ತಿದೆ ಮತ್ತೆ ಆ ಬಸ್ಸು ಆ ರಸ್ತೆಯಲ್ಲಿ ಓಡುತ್ತಿಲ್ಲ. ಇದರಿಂದ ಆ ಭಾಗದಲ್ಲಿರತಕ್ಕ ಸರ್ಕಾರಿ ನೌಕರರು, ಶಾಲಾ ಮಕ್ಕಳು ಇವರಿಗೆಲ್ಲಾ ಹೋಗಿ ಬರುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ಜನ ಸಾಂದ್ರತೆ ಹೆಚ್ಚು ಇರುವುದರಿಂದ ಹೆಚ್ಚು ಬಸ್ಸುಗಳ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವೇ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಈಗಾಗಲೇ ಸನ್ಮಾನ್ಯ ಸದಸ್ಯರು ಹೇಳಿದಂತೆ, ನಾವು ಕೊಟ್ಟಿರುವ ಮಾಹಿತಿ ತಪ್ಪು ಇದ್ದರೆ, ಆ ರೀತಿ ಏನಾದರು ಆಗಿದ್ದರೆ ಆದಷ್ಟು ಬೇಗನೆ ಅದನ್ನು ಅದನ್ನು ಪರಿಶೀಲನೆ ಮಾಡಿ ನಾನು ಟ್ರಾಫಿಕ್ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಪರಿಶೀಲಿಸಿ ಅಗತ್ಯ ಕಂಡು ಬಂದರೆ ಹೆಚ್ಚಿನ ಬಸ್ಸುಗಳನ್ನು ಓಡಿಸುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಹೆಚ್. ಎಂ. ರೇವಣ್ಣ.—ಅಲ್ಲಿ ಬಸ್ಸುಗಳ ಅಗತ್ಯ ಇದೆ. ಅಲ್ಲಿ ಬಸ್ಸುಗಳನ್ನು ಜಾಸ್ತಿ ಓಡಿಸಬೇಕೆಂದು ಹೇಳುತ್ತಿದ್ದೇನೆ. ಅಲ್ಲಿ ಬಸ್ಸುಗಳು ಓಡುತ್ತಿಲ್ಲ. ೩ ಟ್ರಿಪ್ ಮಾತ್ರ ಓಡುತ್ತಿವೆ. ಅಲ್ಲಿ ಜನ ಸಾಂದ್ರತೆ ಹೆಚ್ಚು ಇದೆ. ಜಾಸ್ತಿ ಬಸ್ಸುಗಳನ್ನು ಅಲ್ಲಿಗೆ ಕೊಡಲೇಬೇಕು.

ಶ್ರೀ ಕೆ. ಜೆ. ಜಾರ್ಜ್. ನಮ್ಮ ಟ್ರಾಫಿಕ್ ಅಧಿಕಾರಿಗಳನ್ನು ಇವತ್ತೂ ಅಥವಾ ನಾಳೆಯೇ ಅಲ್ಲಿಗೆ ಕಳುಹಿಸಿ ಅವರಿಂದ ವರದಿ ತರಿಸಿಕೊಂಡು ಆದಷ್ಟು ಬೇಗ ಹೆಚ್ಚುವರಿ ಬಸ್ಸುಗಳನ್ನು ಒದಗಿಸಿಕೊಡುತ್ತೇನೆ.

ಸಿದ್ದಾಪುರ ಹಳ್ಳಿಹೊಳೆ ಮದ್ದೂರು ಜಮ್ಮಲ್ ರಸ್ತೆ

೫೪೮ (೧೫೫೩) ಶ್ರೀ ಜಿ. ಎಸ್. ಆಚಾರ್ (ಚೈತ್ರೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಿಂದೆ ಮಲೆನಾಡು ಹೆದ್ದಾರಿ ಎಂಬ ಅಭಿಧಾನದಿಂದ ಲೋಕೋಪಯೋಗಿ ಇಲಾಖೆಯು ನಿರ್ವಹಣೆಗೆ ಒಳಪಟ್ಟಿರುವ ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಸಿದ್ದಾಪುರ ಹಳ್ಳಿಹೊಳೆ-ಮುದೂರು-ಜಮ್ಮಲ್ ರಸ್ತೆಯು ಅಭಿವೃದ್ಧಿ ತೀರ ಮುಂದಗತಿಯಲ್ಲಿ ನಡೆಯುತ್ತಿರಲು ಕಾರಣವೇನು ?

ಆ) ಆ ರಸ್ತೆಯಲ್ಲಿ ಅಭಿವೃದ್ಧಿ ಕೆಲಸಕ್ಕೆ ರೂಪಿಸಿರುವ ಯೋಜನೆಗಳೇನು ?

ಇ) ಜಿಲ್ಲಾಪರಿಷತ್ತಿನಿಂದ ಸದ್ರಿ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ನಿರ್ವಾಹಣೆಗೆ ವರ್ಗಾಯಿಸಲು ಸಾರ್ವಜನಿಕ ಬೇಡಿಕೆ ಇದ್ದು, ಈ ಕುರಿತು ಸರ್ಕಾರದ ಕ್ರಮವೇನು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ರಸ್ತೆಯು ಜಿಲ್ಲಾಪರಿಷತ್‌ನ ವ್ಯಾಪ್ತಿಯಲ್ಲಿದ್ದು ಕಾಮಗಾರಿಗಳಿಗೆ ಸಾಕಷ್ಟು ಅನುದಾನ ಲಭ್ಯವಿಲ್ಲದ ಕಾರಣ ಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗಿವೆ.

ಆ) ೧) ೫.೫೦ ಕಿ. ಮೀ. ನಿಂದ ೬.೮೦ ಕಿ. ಮೀ. ವರೆಗೆ ೨,೦೦ ಲಕ್ಷ ರೂ. ಗಳ ಅಂದಾಜಿನಲ್ಲಿ ಡಾಂಬರು ಹಾಕುವುದು.

೨) ೬.೮೦ ಕಿ. ಮೀ. ನಿಂದ ೧೦.೪೦ ಕಿ. ಮೀ. ವರೆಗೆ ೧೦. ೯೦ ಲಕ್ಷ ರೂ. ನಲ್ಲಿ ಅಭಿವೃದ್ಧಿ ಪಡಿಸುವುದು.

೩) ೧೦.೪ ಕಿ. ಮೀ. ನಿಂದ ೧೧.೭೦ ಕಿ. ಮೀ. ವರೆಗೆ ೧.೫೦ ಲಕ್ಷ ರೂ ನಲ್ಲಿ ಡಾಂಬರು ಹಾಕುವುದು.

೪) ಳಿನೇ ಕಿ. ಮೀ. ನಲ್ಲಿರುವ ಮರದ ಸೇತುವೆಯನ್ನು ೨.೩೩ ಲಕ್ಷ ರೂ.ಗಳ ವೆಚ್ಚದಲ್ಲಿ ಪುನರ್ ನಿರ್ಮಾಣ ಮಾಡಲಾಗಿದೆ.

೫) ಈ ಸೇತುವೆಗೆ ಕೂಡು ರಸ್ತೆಯನ್ನು ೦ ೬೦ ಲಕ್ಷ ರೂ.ನಲ್ಲಿ ಮಾಡಲಾಗಿದೆ.

೬) ಈ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಪ್ರಸ್ತಾವನೆಗೆ ಜಿಲ್ಲಾಪರಿಷತ್ತಿನಿಂದ ಸಹಮತಿ ದೊರೆತ ನಂತರ ಪರಿಶೀಲಿಸಲಾಗುವುದು.

ಶ್ರೀ ಜಿ. ಎಸ್. ಆಚಾರ್.—ನನ್ನ ಪ್ರಶ್ನೆಯಲ್ಲಿ ಪ್ರಸ್ತಾಪಿಸಲ್ಪಟ್ಟ ರಸ್ತೆ ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು.—ಮದ್ದೂರು ರಸ್ತೆ ಬಹಳ ಪ್ರಾಮುಖ್ಯವಾದ ರಸ್ತೆ.

ಶ್ರೀ ಜಿ. ಎಸ್. ಆಚಾರ್.—ಬೇರೆ ಜನರಿಗೆ ನಗು ಬರುತ್ತಿದೆ. ನನಗೆ ಕಣ್ಣೀರು ಬರುತ್ತದೆ.

ಅಧ್ಯಕ್ಷರು.—ನನಗೂ ಕಣ್ಣೀರು ಬರುತ್ತಿದೆ. ನನಗೆ ಮದ್ದೂರಿನಲ್ಲಿರುವ ರಸ್ತೆಗಳ ನೆನಪಾಯಿತು. ನನಗೂ ಆ ರಸ್ತೆಗಳಲ್ಲಿ ಓಡಾಡಿ ಅಭ್ಯಾಸ ಇದೆ.

ಶ್ರೀ ಜಿ. ಎಸ್. ಆಚಾರ್.—ಶ್ರೀ ವಿ. ಶ್ರೀನಿವಾಸ ಮಾಲ್ಯ ರವರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಗತಿಯ ಶಿಲ್ಪಿಗಳು. ಅವರು ಎಂ. ಪಿ. ಯಾಗಿದ್ದಾಗ ಮಲೆನಾಡಿನಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಇರುವ ರೀತಿಯಲ್ಲೇ ಕರಾವಳಿ ಪ್ರದೇಶದಲ್ಲೂ ರಾಷ್ಟ್ರೀಯ ಹೆದ್ದಾರಿಯಾಗಬೇಕೆಂಬ ಯೋಜನೆಯನ್ನು ಹಾಕಿದ್ದರು. ಆದರಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ಆ ರಾಷ್ಟ್ರೀಯ ಹೆದ್ದಾರಿಯು ಳಿಗೆ ಕಿ. ಮೀ. ಬರುತ್ತದೆ. ದುರದೃಷ್ಟವಶಾತ್ ಅವರು ತೀರಿ ಹೋದರು, ಯೋಜನೆಗಳು ಹಿಂದಕ್ಕೆ ಹೋದವು ಏನೂ ಕಾರ್ಯಗತವಾಗಿಲ್ಲ. ಆ ನಂತರ ಏನಾಯಿತು ಎಂದರೆ, ಎರಡೂ ಕಡೆಯಿಂದ ರಸ್ತೆ ಬರೀ ಪೀರ್ಪೇಷನ್ ಆಯಿತು. ಮಧ್ಯೆ ೧೦ ಕಿ. ಮೀ. ಇನ್ಫ್ರಾಸ್ಟ್ರಕ್ಚರ್ ಆಗಲಿಕ್ಕೆ ಇದೆ. ಎರಡೂ ಕಡೆಯಲ್ಲಿ ಬಸ್‌ಗಳು ಹೋಗುತ್ತಿವೆ. ಅದು ಅಸುಸೂಚಿತ ಜಾತಿ ಮತ್ತು ಪಂಗಡದವರು ಹೆಚ್ಚಿಗೆ ಇರುವಂತಹ ಜಾಗ ಇದರಲ್ಲಿ ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆ ? ಅಲ್ಲಿ ಎರಡು ವರ್ಷಗಳಿಂದ ಕೆಲಸವೇ ಆಗಿಲ್ಲ. ಬಜೆಟ್‌ನಲ್ಲಿ ಹಣ ಇರುತ್ತದೆ. ಜಿಲ್ಲಾ ಪರಿಷತ್ತು ಮೂಲಕ

೯–೫೦ ಎ. ಎಂ.

ಯಾವುದೇ ಕೆಲಸ ಆಗಿಲ್ಲ. ಚರಂಡಿ ಕೂಡ ಕ್ಲೀನ್ ಮಾಡಿಲ್ಲ. ನೀರು ರಸ್ತೆಮಧ್ಯೆ ಹೋಗುತ್ತಿದೆ. ಜನರ ಪ್ರತಿಭಟನೆ ಶುರುವಾಗಿದೆ. ಶಾಸಕರಿಗೆ ಧಿಕ್ಕಾರ, ಜಿಲ್ಲಾ ಪರಿಷತ್ತಿಗೆ ಧಿಕ್ಕಾರ, ಸರ್ಕಾರಕ್ಕೆ ಧಿಕ್ಕಾರ ಎಂದು ಪ್ರತಿಭಟನೆ ಪ್ರಾರಂಭವಾಗಿದೆ. ಆಲ್ಲಿರತಕ್ಕ ಗ್ಯಾಂಗ್‌ಮನ್‌ಗಳು ಎಲ್ಲೋ ಅಧಿಕಾರಿಗಳ ಮನೆಯಲ್ಲಿ ಖಾಸಗಿಯಾಗಿ ಕೆಲಸ ಮಾಡುತ್ತಿದ್ದಾರೆ. ಈ ವಿಷಯವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದೆ. ಅವರನ್ನು ಬೇರೆ ಕಡೆ ಎಲ್ಲೋ ಟ್ರಾನ್ಸ್‌ಫರ್ ಮಾಡಿದ್ದಾರೆ. ಅವರು ಹತ್ತತ್ತು ವರ್ಷಗಳಿಂದ ಅಲ್ಲೇ ಇದ್ದಾರೆ. ರಸ್ತೆ ಮೇಲೆ ಕೆಲಸ ಮಾಡಬೇಕಾದ ಜನ ಎಲ್ಲೋ ಕೆಲಸ ಮಾಡುತ್ತಿದ್ದಾರೆ. ಈ ವ್ಯವಸ್ಥೆಯಾಗಿದೆ. ನಾನು ಮಂತ್ರಿಗಳಿಗೆ ಕೇಳುವುದು ಇಷ್ಟೆ. ಈ ೪೫ ಕಿಲೋ ಮೀಟರ್‌ನಲ್ಲಿ ೫೫ ಕಿಲೋಮೀಟರ್ ಕೂಡ ಬ್ಲಾಕ್ ಟಾಪಿಂಗ್ ಆಗಿಲ್ಲ. ಉಳಿದ ೪೦ ಕಿಲೋಮೀಟರನ್ನು ಯಾವಾಗ ಮಾಡುತ್ತೀರಿ ? ಉತ್ತರದಲ್ಲಿ ಳಿನೇ ಕಿಲೋಮೀಟರ್‌ನಲ್ಲಿರುವ ಬಿದ್ದುಹೋದ ಮರದ ಸೇತುವೆಯನ್ನು ಪುನರ್ನಿರ್ಮಾಣ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ಪುನರ್ನಿರ್ಮಾಣ ಮಾಡಲೇಬೇಕು, ಮಾಡದೇ ಉಪಾಯವಿಲ್ಲ. ಅದು ಅತ್ಯಂತ ಜನನಿಬಿಡವಾದ ಪ್ರದೇಶ. ಬಸ್ಸುಗಳು ಹೋಗುತ್ತಿವೆ, ಬಹಳ ಗಲಾಟೆಯಾಯಿತು, ಎಂ. ಪಿ. ಗಳು ಮಂತ್ರಿಗಳ ಗಮನಕ್ಕೆ ಬಂತು. ಆದ ಆದನ್ನು ಕಟ್ಟಿದ್ದಾರೆ. ಅದು ಬಿಟ್ಟರೆ ಬೇರೆ ಕೆಲಸ ಆಗಿಲ್ಲ. ಯಾವಾಗ ಆಗುತ್ತದೆ ? ಕಳೆದ ಅಧಿವೇಶನದಲ್ಲಿ ಪಿ.ಡಬ್ಲ್ಯೂ. ಡಿ. ಗೆ ವರ್ಗಾಹಿಸಿಕೊಳ್ಳಿ ಎಂದು ಹೇಳಿದ್ದೆ. ಜಿಲ್ಲಾ ಪರಿಷತ್ತಿನಲ್ಲಿ ಮೂರು ಮಂಡಲಗಳು ಬರುತ್ತವೆ. ಆದರಲ್ಲಿರುವ ಹಣದಲ್ಲಿ ಅಭಿವೃದ್ಧಿ ಆಗುವುದಿಲ್ಲ. ತಾವು ಮಾಡಿಸಬೇಕು ಎಂದು ಹೇಳಿದ್ದೆ. ಆದಷ್ಟು ಜಾಗ್ರತೆ ವಹಿಸಿ ತರಿಸಿಕೊಂಡು ಈ ರಸ್ತೆ ಕೆಲಸವನ್ನು ಮಾಡುವಂತೆ ನಾನು ಕೇಳಿಕೊಂಡಿದ್ದೆ. ಇದು ಮದ್ದೂರು–ಜಡ್ಕಲ್ ರಸ್ತೆ ಇದೆ. ಮದ್ದೂರು ಅಂದರೆ ಮಾನ್ಯ ಅಧ್ಯಕ್ಷರ ನೆನಪಿಗೆ ಬರಬಹುದು. ಕರ್ನಾಟಕ ರಾಜ್ಯದಲ್ಲಿ ಮದ್ದೂರು ಎಲ್ಲೇ ಇರಲಿ ಅದರ ಬಗ್ಗೆ ಅಭಿಮಾನ ಅವರಿಗೆ ಇರುತ್ತದೆ. ಆದ್ದರಿಂದ ನಮ್ಮ ರಕ್ಷಣೆಗೆ ಮಾನ್ಯ ಅಧ್ಯಕ್ಷರು ಬರಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸಿದ್ದಾಪುರ–ಹಳ್ಳಿಹೊಳೆ, ಮುದ್ದೂರು–ಜಡ್ಕಲ್ ರಸ್ತೆ ೪೨ ಕಿಲೋಮೀಟರ್ ದೂರದ ರಸ್ತೆಯಾಗಿದ್ದು ಅದು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಇದರಲ್ಲಿ ೫.೫ ಕಿಲೋಮೀಟರ್ ಡಾಂಬರ್ ರಸ್ತೆ. ಮೊದಲು ಇದಕ್ಕೆ ಮಂಜೂರಾತಿ ನೀಡಲಾಗಿದೆ. ಈ ರಸ್ತೆ ಮಣ್ಣು ರಸ್ತೆಯಾಗಿದ್ದು ಸಂಚಾರಕ್ಕೆ ಬಹಳ ಅನಾನುಕೂಲವಾಗಿರತಕ್ಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆಯನ್ನು ಮಾಡುವುದಕ್ಕೆ ೯೫ ಲಕ್ಷ ರೂಪಾಯಿಗಳು ಬೇಕೆಂದು ಅಂದಾಜು ಮಾಡಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ ಹಣದ ಕೊರತೆಯಿಂದ ಈ ಕೆಲಸವನ್ನು ಮಾಡಲಿಕ್ಕೆ ಆಗಲಿಲ್ಲ ಎಂದು ಅವರು ತಿಳಿಸಿದ್ದಾರೆ. ಸನ್ಮಾನ್ಯ ಸದಸ್ಯರು ಸರ್ಕಾರಕ್ಕೆ ಮನವಿ ಕೊಟಮೇಲೆ ಆ ಬಗ್ಗೆ ಪ್ರಸ್ತಾವನೆಯನ್ನು ಜಿಲ್ಲಾ ಪರಿಷತ್ತಿಗೆ ಕಳುಹಿಸಿದ್ದೇನೆ. ಇನ್ನೂ ಕೂಡ ಅದು ಸರ್ಕಾರಕ್ಕೆ ಬರಲಿಲ್ಲ. ಬಂದನಂತರ ಅದನ್ನು ವೇಲ್ದರ್ಜೆಗೇರಿಸಿ ಆ ರಸ್ತೆಯನ್ನು ಸರ್ಕಾರಿ ರಸ್ತೆಯನ್ನಾಗಿ ಮಾಡಿ ಹಂತ ಹಂತವಾಗಿ ಕೆಲಸ ತೆಗೆದುಕೊಳ್ಳುತಕ್ಕ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎಸ್ ಆಚಾರ್.—ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರವಾಗಿ ಸನ್ಮಾನ್ಯ ಮಂತ್ರಿಗಳ ಹತ್ತಿರ ಜಿಲ್ಲಾ ಪರಿಷತ್ತಿನಿಂದ ಪಿ. ಡಬ್ಲ್ಯು. ಡಿ. ಗೆ ಈ ರಸ್ತೆಯನ್ನು ತೆಗದುಕೊಳ್ಳಿ ಎಂದು ಮನವಿ ಕೊಟ್ಟಿದ್ದೆ. ಜಿಲ್ಲಾ ಪರಿಷತ್ತಿಗೂ ಕೊಟ್ಟಿದ್ದೆ. ನಮ್ಮ ಜಿಲ್ಲಾ ಪರಷತ್ತಿನಲ್ಲಿ ಏನಾಯಿತು ಎಂದರೆ, ಇಲ್ಲಿ ಒಬ್ಬೊಬ್ಬ ಶಾಸಕರ ಅರ್ಜಿಯನ್ನು ತೆಗೆದುಕೊಂಡು ಪಿ. ಡಬ್ಲ್ಯು. ಡಿ. ಗೆ ವರ್ಗಾಯಿಸುವುದು ಸರಿಯಲ್ಲ. ಸಮಗ್ರವಾಗಿ ವಿಚಾರ ಮಾಡೋಣ ಎಂದು ಹೇಳಿದ್ದೆ, ಯಾವುದಾದರೂ ವಿಚಾರ ಇದ್ದರೆ ಆಯೋಗ ರಚನೆ ಮಾಡಿದಹಾಗೆ ನೆನೆಗುದಿಗೆ ಹಾಕಿದರು. ನಾನು ಮಾನ್ಯ ಲೋಕೋಪಯೋಗಿ ಸಚಿವರಲಿ ಅರಿಕೆ ಮಾಡುತ್ತೇನೆ, ತಾವೇ ನಮ್ಮ ರಕ್ಷಣೆಗೆ ಬರಬೇಕು. ಸ್ಪೆಷಲ್ ಕೇಸ್ ಆಗಿ ಈ ರಸ್ತೆಯನ್ನು ಕಾಮಗಾರಿ ಇಲಾಖೆಯಿಂದ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಬಹುಶಃ ತಮಗೇ ಆ ಅಧಿಕಾರ ಇದೆ ರೂರಲ್ ಡೆವಲಪ್‌ಮೆಂಟ್ ರಸ್ತೆಯನ್ನು ವಿತ್‌ಡ್ರಾ ಮಾಡಿಕೊಂಡು ಈ ಕೆಲಸ ಮಾಡಬಹುದು. ಮಾನ್ಯ ಸಚಿವರು ವಿಶೇಷ ಹಕ್ಕನ್ನು ಚಲಾಯಿಸಿ ನಮ್ಮ ರಕ್ಷಣೆಗೆ ಬರಬೇಕು. ಈ ಮಲೆನಾಡು ಹೆದ್ದಾರಿ ಬಗ್ಗೆ ಹಿಂದಿನವರು ಏನು ಕನಸು ಕಂಡಿದ್ದರು ಅದು ನನಸಾಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಆಚಾರ್‌ರವರು ಹೇಳಿದಹಾಗೆ, ಜಿಲ್ಲಾ ಪರಿಷತ್ ರಸ್ತೆಗಳನ್ನು ಸರ್ಕಾರಕ್ಕೆ ವಹಿಸಿಕೊಡುವುದಕ್ಕೆ ರಾಜ್ಯಮಟ್ಟದಲ್ಲಿ ಹೈ ಪವರ್ ಕಮಿಟ ಎಂದು ಮಾಡಿದ್ದೇವೆ. ಆ ಕಮಿಟಿಯಲ್ಲಿ ಈಗಾಗಲೇ ಇರದ ಬಗ್ಗೆ ಪರ್ಯಾಲೋಚನೆ ನಡೆಯುತ್ತಿದೆ. ಆದರೆ ಸನ್ಮಾನ್ಯ ಸದಸ್ಯರು ಹೇಳಿದಹಾಗೆ, ಒಂದೊಂದು ರಸ್ತೆಯನ್ನು ಒಂದೊಂದು ಸಾರಿ ಪರಿಶೀಲನೆ ಮಾಡುವುದು ಜಿಲ್ಲಾಪರಿಷತ್ತಿಗೆ ಎಷ್ಟು ಸಮಸ್ಯೆಯಾಗುತ್ತದೋ ಅಷ್ಟೇ ರಾಜ್ಯಮಟ್ಟದ ಹೈ ಪವರ್ ಕಮಿಟಿಗೂ ಸಮಸ್ಯೆ ಆಗಿರುವುದರಿಂದ ಸ್ವಲ್ಪ ನಿಧಾನ ಆಗಿದೆ. ಬಹುಶಃ ಆದಷ್ಟು ಬೇಗ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಲೋಕೋಪಯೋಗಿ ಇಲಾಖಾ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ಇನ್ನೊಂದು ಹೈ ಪವರ್ ಕಮಿಟಿ ಇದೆಯೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ. —ಇಲ್ಲ ಅಧ್ಯಕ್ಷರೇ.

ಶ್ರೀ ಜಿ. ಎಸ್, ಆಚಾರ್.—ಎಲ್ಲಾ ವಿಧಾನಗಳನ್ನು ತ್ವರಿತ ಮಾಡುವುದಕ್ಕೆ ಹೈ ಪವರ್ ಕಮಿಟಿ ಮಾಡಬೇಕಾಗುತ್ತದೋ ಏನೋ ?

ಶ್ರೀ ಕೆ. ಲಕ್ಕಪ್ಪ.—ಜಿಲ್ಲಾ ಪರಿಷತ್ತುಗಳ ವ್ಯಾಪ್ತಿಯಲ್ಲಿ ನೀರಾವರಿ ಕೆಲಸಗಳು ಆಗುತ್ತಾ ಇಲ್ಲ ಎನ್ನುವುದನ್ನು ಕಂಡು ಈಗಾಗಲೇ ರಿಪೋರ್ಟ್, ರೆವ್ಯೂ ಎಲ್ಲಾ ಆಗಿದೆ. ಅದನ್ನು ಅಪ್‌ಗ್ರೇಡ್ ಮಾಡಿ, ಅವರ ಹತ್ತಿರ ಎನ್ ಒ ಸಿ ಎಲ್ಲಾ ಮಾಡಲು ಬಹಳ ವಿಳಂಬವಾಗುತ್ತದೆ. ಆದುದರಿಂದ ಎಲ್ಲಿ ಜಿಲ್ಲಾ ಪರಿಷತ್ತುಗಳು ಈ ಬಗ್ಗೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೋ ಹಣದ ಕೊರತೆ ಅಥವಾ ಏನೋ ತೊಂದರೆ ಇದ್ದ ಪಕ್ಷದಲ್ಲಿ ಅದನ್ನು ವಿತಾಡ್ರಾ ಮಾಡುವುದಕ್ಕೆ ಜಿಲ್ಲಾಪರಿಷತ್ತಿನಲ್ಲಿ ಅವಕಾಶ ಇದೆ. ಆ ಅವಕಾಶವನ್ನು ಉಪಯೋಗಿಸಿ ಈ ರಿತಿಯಲ್ಲಿ ವಿತ್‌ಡ್ರಾ ಮಾಡುವುದಕ್ಕೆ ಮಾನ್ಯ ಪಂಚಾಯತಿ ರಾಜ್ ಹಾಗೂ ಲೋಕೋಪಯೋಗಿ ಮಂತ್ರಿಗಳಿಬ್ಬರೂ ಸೇರಿ ಜಂಟಿಯಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರಾ ?

ಅಧ್ಯಕ್ಷರು.—ನೀರಾವರಿ ಕಾಮಗಾರಿಗಳನ್ನೇ ?

ಶ್ರೀ ಕೆ. ಲಕ್ಕಪ್ಪ.—ನೀರಾವರಿ, ಸಣ್ಣ ನೀರಾವರಿ...

ಅಧ್ಯಕ್ಷರು,—ಇದು ರಸ್ತೆಬಗ್ಗೆ ಪ್ರಶ್ನೆ ಇದೆ.

ಶ್ರೀ ಕೆ. ಲಕಪ್ಪ—ಅದೇ ಪ್ರಶ್ನೆಯನ್ನೇ ನೀವು ವಿತ್‌ಡ್ರಾ ಮಾಡುವುದಕ್ಕೆ ಅವಕಾಶವಿದೆ-

ಅಧ್ಯಕ್ಷರು.—ನೀರಾವರಿ ರಸ್ತೆಗಳನ್ನೇ ನೀವು ಹೇಳುತ್ತಾ ಇರುವುದು ?

ಶ್ರೀ ಸಿ. ಭೈರೇಗೌಡ.—ಅವರಿಗೆ ಇಂಗ್ಲೀಷಿನಲ್ಲಿ ಮಾತನಾಡಿ ರೂಢಿ. ಈಗ ಕನ್ನಡದಲ್ಲಿ ಮಾತನಾಡಿ ಗೊಂದಲಕ್ಕೆ ಸಿಲುಕಿದ್ದಾರೆ.

ಅಧ್ಯಕ್ಷರು.—ನೀರಾವರಿ ರಸ್ತೆಗಳ ಬಗ್ಗೆ ತಾವು ಹೇಳುತ್ತಿದ್ದೀರಾ ?

ಶ್ರೀ ಕೆ. ಲಕ್ಕಪ್ಪ.—ಇವತ್ತು ಜಿಲ್ಲಾಪರಿಷತ್ತಿನಲ್ಲಿ ಹಣವಿಲ್ಲದೇ ಕೆಲಸ ಮಾಡುವುದಕ್ಕೆ ಆರ್ಥಿಕವಾಗಿ ಶಕ್ತಿ ಇಲ್ಲ. ಆದ್ದರಿಂದ ಇವನ್ನು ವಿತ್‌ಡ್ರಾ ಮಾಡುವುದಕ್ಕೆ ಅವಕಾಶ ಇದೆ. ಈ ಬಗ್ಗೆ ಇಬ್ಬರು ಮಂತ್ರಿಗಳೂ ಯೋಚನೆ ಮಾಡಿ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಅತಿ ಶೀಘ್ರವಾಗಿ ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಈಗಾಗಲೇ ಸರ್ಕಾರ ಅವರಿಗೆ ಮಹಿಸಿಕೊಟ್ಟಿದೆ. ಅದನ್ನು ಪುನಃ ತೆಗೆದುಕೊಳ್ಳಬೇಕಾದರೆ ಅವರಿಂದ ಒಂದು ಸಾರಿ ಕನ್ಸೆಂಟ್ ತೆಗೆದುಕೊಂಡು ಎನ್ ಓ ಸಿ ತೆಗೆದುಕೊಳ್ಳಬೇಕೆನ್ನುವುದು ಔಪಚಾರಿಕವಾದ ವಿಚಾರವೇ ಹೊರತು ಕಾಯ್ದೆ

ಶ್ರೀ ಕೆ. ಲಕ್ಕಪ್ಪ.—ಜಿಲ್ಲಾಪರಿಷತ್ತಿನಲ್ಲಿ ಕೆಲಸಮಾಡದೇ ಇದ್ದರೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಕಾನೂನು ಚಾಲನೆ ಮಾಡುವುದು...

ಶ್ರೀ ಸಿ. ಭೈರೇಗೌಡ.—ದುಡ್ಡು ಕೊಟ್ಟರೆ ಅವರೇ ಮಾಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ದುಡ್ಡು ಕೊಟ್ಟರೂ ಕೆಲಸ ಆಗದೇ, ಈ ರೀತಿಯ ಕೆಲಸ ಮಾಡಿದರೆ, ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳುತ್ತವೆ.

ಶ್ರೀ ಎಂ. ವೈ. ಘೋರ್ಪಡೆ:—ರಸ್ತೆಗಳನ್ನು ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಕೊಟ್ಟಿದ್ದು ಇದಕ್ಕೆ ಬೇಕಾಗುವ ಹಣವನ್ನು ಯಾವುದೇ ಕಾರಣಕ್ಕೊಸ್ಕರ ಸರ್ಕಾರ ಕೊಡುವುದಕ್ಕೆ ಆಗದೇ ಇದ್ದರೆ ಹಾಗೂ ಆ ರಸ್ತೆ ಏನಾದರೂ ಮುಖ್ಯ ರಸ್ತೆ ಇದ್ದರೆ ಸರ್ಕಾರಕ್ಕೆ ನೇರವಾಗಿ ಆ ರಸ್ತೆಗೋಸ್ಕರ ಹಣವನ್ನು ಕೊಡುವುದಕ್ಕೆ ಅವಕಾಶವಿದೆ, ಅಥವಾ ನೇರವಾಗಿ ಆ ರಸ್ತೆಗೆ ಸರ್ಕಾರ ಹಣವನ್ನು ಖರ್ಚು ಮಾಡಿ ಅದರ ಕೆಲಸವನ್ನು ಮಾಡಿದರೆ ಯಾವ ಜಿಲ್ಲಾಪರಿಷತ್ತೂ ಆಕ್ಷೇಪಣೆ ಮಾಡುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ಇದು ಅಧಿಕಾರದ ವ್ಯಾಪ್ತಿಯ ಪ್ರಶ್ನೆಯಲ್ಲ. ಇಲ್ಲಿ ಹಣಕಾಸಿನ ಪ್ರಶ್ನೆ ಇದೆ. ಆದ್ದರಿಂದ ಯಾವ ರಸ್ತೆಗೆ ಆದ್ಯತೆ ಕೊಟ್ಟು ಮಾಡಿಸಬೇಕೆನ್ನುವ ಪ್ರಶ್ನೆ ಇದೆ. ಪ್ರಮುಖ ರಸ್ತೆ ಎಂದರೆ ಆದನ್ನು ನೇರವಾಗಿ ಮಾಡಬಹುದು.

ಸಭಾಪತಿಯವರು.—ಈಗ ಮುಂದಿನ ಪ್ರಶ್ನೆ ಹಂಪನಗೌಡ ಅವರದ್ದು.

(ಕೆಲವು ಮಾನ್ಯ ಸದಸ್ಯರುಗಳು ಉಪಪ್ರಶ್ನೆಗೆ ಅವಕಾಶ ಕೊಡಬೇಕೆಂದು ಎದ್ದು ನಿಂತು ಕೇಳಿಕೊಳ್ಳುತ್ತಿದ್ದರು)

MR SPEAKER.—What he means is anything that they are incapable of doing.

ಶ್ರೀ ಕಾಗೋಡುತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ,...

(INTERRUPTIONS)

MR. SPEAKER. Did I hear Mr. Kagodu Thimmappa talking about policy ?

SRI KAGODU THIMMAPPA.—Yes. The statement made by the hon. Minister...

MR. SPEAKER.—Would you kindly listen to me? During question hour do you think that you can elicit reply on a policy matter?

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಲ್ಲ ಸಾರ್. The reply given by the hon. Minister is not satisfactory.

MR. SPEAKER.—Where it is said that the reply given by the Minister should be satisfactory? You have been a very seasoned legislator. Show me any provision, I am sending this rules book to you. Where it says that the answer given by the minister should be satisfactory?

ಶ್ರೀ ಕಾಗೋಡು ತಿಮ್ಮಪ್ಪ.- ತಾವು ಹೇಳಿದ್ದು ಸರಿ, ನಾನು ಒಪ್ಪುತ್ತೇನೆ, ಕಾನೂನು ಪ್ರಕಾರ ನಾವು ಜಿಲ್ಲಾಪರಿಷತ್ ಯಾವ ರಸ್ತೆಗಳನ್ನು ಮಹಿಸಿಕೊಟ್ಟಿದ್ದೇವೆ ಆ ರಸ್ತೆಗಳನ್ನು ಈಗ ಪುನಃ ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆ ಇರತಕ್ಕದ್ದು, ವಾಪಸ್ಸು ತೆಗೆದುಕೊಳ್ಳುವ ಅಧಿಕಾರ ಇದೆಯೆ? ಹಣ ಕೊಡುವುದು ಬಿಡುವುದು ಬೇರೆ ಪ್ರಶ್ನೆ, ಅಧಿಕಾರ ಇದ್ದರೆ ತೆಗೆದುಕೊಳ್ಳಿ.

ಶ್ರೀ ಎಂ.ಪಿ. ವೆಂಕಟೇಶ್.—ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಆ ರಸ್ತೆಗಳಿಗೆ ಹಣವನ್ನು ಬಿಡುಗಡೆ ಮಾಡಬಹುದು. ನೇರವಾಗಿ ಅವುಗಳನ್ನು ತೆಗೆದುಕೊಂಡು ಕೆಲಸ ಶುರುಮಾಡಬಹುದು ನೀವು ಕೆಲಸಮಾಡಿಯೆಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ.

MR. SPEARER.—The only conclusion to which I can come is, Mr. Gorphade's intervention in trying to help Sri Puttaswamy Gowda has certainly resulted in the other way of potting...

(INTERRUPTIONS)

MR. SPEAKER.—Please try to Understand Mr, Gorphade's replay. I think it is very factual. All that he suggested was that government was bound by the cancept of decentralisation of power Having decentralised certain powers to the Zilla Parishads and if there are shortcomings you know on a particular.....

ಶ್ರೀಮತಿ ಚಂದ್ರಪ್ರಭ ಅರಸ್.—ಮಾನ್ಯ ಅಧ್ಯಕ್ಷರೆ, ವಿಕೇಂದ್ರೀಕರಣದ ಹೆಸರಿನಲ್ಲಿ ಕೈ, ಕಾಲು ಬೇರೆ ಬೇರೆ ಮಾಡಿ ಇಟ್ಟಿದ್ದಾರೆ. ಅದನ್ನು ದಯವಿಟ್ಟು ಜೋಡಿಸಿ ಕೊಡಿ.

MR. SPEAKER.—Let us hear Mr. Gorphade again.

ಶ್ರೀ ಎಂ.ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೆ, ರೂರಲ್ ವಾಟರ್ ಸಪ್ಲೈಗೆ ನಾವು ಇಲ್ಲಿಂದ ಹಣವನ್ನು ಕಳುಹಿಸುತ್ತೇವೆ, ಅದು ಕೂಡ ಜಿಲ್ಲಾಪರಿಷತ್ ಬಜೆಟ್‌ನಲ್ಲಿ ಸೇರಿರುತ್ತದೆ. ನಾವು ಹಣವನ್ನು ಕಳುಹಿಸುವಾಗ ಇಂತಿಂಥ ಕೆಲಸಗಳಿಗೆ ಉಪಯೋಗಿಸಬೇಕೆಂದು ತಿಳಿಸಿರುತ್ತೇವೆ. ಅದನ್ನು ವಾಪಸ್ಸು ತೆಗೆದುಕೊಳ್ಳುವ ಅಥವಾ ಕೊಡುವ ಪ್ರಶ್ನೆಯಿಲ್ಲ, ಇಲ್ಲಿ ಹಣಕಾಸಿನ ಪ್ರಶ್ನೆ ಇದೆ ಯಾವ ಕೆಲಸಗಳಿಗೆ ಆದ್ಯತೆಯನ್ನು ಕೊಡಬೇಕೊ ಆ ಕೆಲಸಗಳಿಗೆ ಆದ್ಯತೆಯನ್ನು ಕೊಟ್ಟರೆ ಅದಕ್ಕೆ ಯಾವ ಕಾನೂನೂ ಅಡ್ಡಿ ಬರುವುದಿಲ್ಲವೆಂದು ನನ್ನ ಅನಿಸಿಕೆ.

MR. SPEAKER.—Now the Law Minister wants to bail us out,

SRI D. B. CHANDRE GOWDA.—Before Law Minister intervenus, I would like to make one or two points.

MR. SPEAKER.—Would you like to add to the confusion ?

SRI D. B. CHANDRE GOWDA.—No, I would like to clear the confusion. ಶ್ರೀಮತಿ ಚಂದ್ರಪ್ರಭಾಅರಸ್‌ರವರು ಕಣ್ಣು, ಕಿವಿ, ಕೈ, ಕಾಲು ಕಿತ್ತು ಜಿಲ್ಲಾಪರಿಷತ್‌ಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಈ ಜಿಲ್ಲಾಪರಿಷತ್‌ನ ಶಾಸನ ಯಾವುದೇ ಒಂದು ಪಕ್ಷದ ಶಾಸನ ವಾಗಿಲ್ಲ. ಎರಡೂ ಪಕ್ಷಗಳೂ ಸೇರಿ ಜಂಟಿ ಸಲಹಾ ಸಮಿತಿಯನ್ನು ಮಾಡಿ ಆದು ವಿಭಿನ್ನ ರಾಜ್ಯಗಳಿಗೆ ಭೇಟಿಕೊಟ್ಟು ಅಲ್ಲಿನ ಜಿಲ್ಲಾಪರಿಷತ್‌ನ ಕಾಯಿದೆಗಳನ್ನು ಪರಿಶೀಲನೆ ಮಾಡಿ ಆಮೇಲೆ ಈ ಶಾಸನ ಮಾಡ ಲಾಗಿದೆ. ಅದಕ್ಕೆ ತಾವು ಪಾತ್ರಧಾರಿಗಳು ಇದ್ದೀರಿ. ಈಗ ಕಣ್ಣು, ಕಿವಿ, ಕೈ, ಕಾಲು ಕಿತ್ತುಕೊಟ್ಟ ರೆಂದು ಹೇಳತಕ್ಕ ಭಾಷೆ ಏನಿದೆ ಆದಕ್ಕೆ ಈ ಶಾಸನಸಭೆಯಲ್ಲಿ ಏನು ಅರ್ಥ ಬರುತ್ತದೆಂದರೆ, ಹಿಂದಿನ ಸರ್ಕಾರ ಯಾರನ್ನೂ ಕೇಳದೆ ಮಾಡಿದೆ ಎನ್ನುವ ಭಾವನೆ ಬರುತ್ತದೆ. ಆದ್ದರಿಂದ ಆ ಭಾವನೆ ಬರುವುದು ಬೇಡ.

ಶ್ರೀ ಬಿ.ಹೆಚ್. ಬನ್ನಿಕೊಡ್.—ರಾಜ್ಯದಲ್ಲಿ ಈಗ ಇವರ ಸರ್ಕಾರ ಅಧಿಕಾರಕ್ಕೆ ಬಂದಿದೆ. ಜಿಲ್ಲೆ ಗಳಲ್ಲಿ ನಮ್ಮ ಪಕ್ಷದ ಜಿಲ್ಲಾಪರಿಷತ್‌ಗಳು ಇವೆ. ಆದಕ್ಕೆ ಇವರಿಗೆ ಅಸೂಯೆ.

ಶ್ರೀ ಎಂ.ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೆ, ಯಾರೇ ಕೆಲಸ ಮಾಡಲಿ, ಅದೇ ಅಧಿಕಾರಿಗಳು ಕೆಲಸ ಮಾಡಬೇಕು.

(INTERRUPTIONS)

MR. SPEAKER.—Order, order please. Kindly listen to him.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೆ, ಒಂದು ಮೂಲಭೂತವಾದ ಮಾತನ್ನು ಅರ್ಥಮಾಡಿಕೊಳ್ಳಬೇಕು. ಯಾರೇ ಅಧಿಕಾರದಲ್ಲಿದ್ದರೂ ಅಧಿಕಾರಿಗಳೇ ಕೆಲಸ ಮಾಡಬೇಕು ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಆದೇಶ ಕೊಟ್ಟರೆ, ಜಿಲ್ಲಾಪರಿಷತ್‌ನವರು ಆದೇಶ ಕೊಟ್ಟರೆ ಆದೇ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಾರ್ಯಗತ ಮಾಡಬೇಕು. ಜಿಲ್ಲಾಮಟ್ಟದಲ್ಲಿರತಕ್ಕ ಅಧಿಕಾರಿಗಳಿಗೆ, ವಿಭಾಗೀಯ ಮಟ್ಟದಲ್ಲಿರತಕ್ಕ ಅಧಿಕಾರಿಗಳಿಗೆ ಕಾನೂನು ಪ್ರಕಾರ ಕೆಲಸ ಮಾಡಲಿಕ್ಕೆ ಅಧಿಕಾರವಿದೆ. ಅವರೇ ಆ ಕೆಲಸ ಮಾಡಬೇಕು. ಅವರಿಗೆ ಆದೇಶ ಕೊಡುವಂತಹ ಸಂಪೂರ್ಣ ಹಕ್ಕು ಮಂತ್ರಿಗಳಿಗೆ ಇದೆ. ಜಿಲ್ಲಾಪರಿಷತ್‌ನವರು ನಾವು ಕೊಟ್ಟಿರುವ ಕೆಲಸಕ್ಕಿಂತ ಜಾಸ್ತಿ ಕೆಲಸ ಮಾಡಿದರೆ ಅದಕ್ಕೆ ನಾವೇನು ಅಡ್ಡಿ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ನಾನು ಇನ್ನೊಂದು ಗೊಂದಲ ಹುಟ್ಟಿಸ ಬೇಕೆಂಬ ಅಭಿಪ್ರಾಯದಿಂದ ಎದ್ದು ನಿಂತಿಲ್ಲ. ಈಗ ಸರ್ಕಾರದ ಕಡೆಯಿಂದ...

ಶ್ರೀ ವಾಟಾಳ್ ನಾಗರಾಜ್.—ಗೊಂದಲದ ಸಚಿವರೇ ಇವರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸರ್ಕಾರದ ಕಡೆಯಿಂದ ಉತ್ತರ ಕೊಡುವಾಗ ಆ ದ್ವಂದ್ವ ಅರ್ಥ ಇದೆ ಎಂಬ ಅಭಿಪ್ರಾಯ ಬರಬಾರದು. ಸನ್ಮಾನ್ಯ ಕಾಮಗಾರಿ ಮಂತ್ರಿಗಳಾಗಲೀ, ಗ್ರಾಮಾಣಾಭಿ ವೃದ್ಧಿ ಮಂತ್ರಿಗಳಾಗಲೀ, ಹೇಳಿದ್ದರಲ್ಲಿ ಏನೂ ದ್ವಂದ್ವ ಇಲ್ಲ. It contributes together. ಸನ್ಮಾನ್ಯ ಕಾಮಗಾರಿ ಮಂತ್ರಿಗಳು ಏನು ಹೇಳುತ್ತಿದ್ದಾರೆ ಎಂದರೆ, ಇದು ಹಿಂದಿನ ವಿಕೇಂದ್ರೀಕರಣ ದಿಂದ ಇದ್ದದ್ದು : ಯಾವುದೇ ಒಂದು ರಸ್ತೆ ಸ್ಥಳೀಯ ಸಂಸ್ಥೆಗಳಲ್ಲಿ ಇದ್ದರೆ ಅದನ್ನು ಮೇಲ್ದರ್ಜೆಗೆ ಏರಿಸಿಕೊಂಡು ಸರ್ಕಾರ ವಹಿಸಿಕೊಳ್ಳತಕ್ಕದ್ದು ಬಂದು ರೀತಿ. ಅಧಿಕಾರ ವಿಕೇಂದ್ರೀಕರಣದಲ್ಲಿ ಆದೇನೂ ಹೊಸತು ಅಲ್ಲ. ಆದ್ದರಿಂದ ಯಾವುದೇ ಒಂದು ಜಿಲ್ಲಾಪರಿಷತ್ತಿನಲ್ಲಾಗಲಿ, ಅಧಿಕಾರ ವಿಕೇಂದ್ರೀಕರಣ ವಿಚಾರದಲ್ಲಿ ಆಗಲಿ ಇದರಿಂದ ತೊಂದರೆ ಬರುವುದಿಲ್ಲ. ಸನ್ಮಾನ್ಯ ಗ್ರಾಮಾಣಾಭಿವೃದ್ಧಿ ಮಂತ್ರಿಗಳು ಪೂರಕವಾಗಿ ಏನು ಹೇಳಿದರೆಂದರೆ, ಈಗ ಇರತಕ್ಕಂಥ ಕಾನೂನಿನಲ್ಲಿ ಯಾವುದೇ ಒಂದು ಕೆಲಸಕ್ಕೆ funds could be earmarked for a particular item of work by the Zilla Parishat itself. ಮೇಲ್ದರ್ಜೆಗೆ ಏರಿಸದಿದ್ದರೂ ಕೂಡ ಜಿಲ್ಲಾಪರಿಷತ್ತು under the present ambit of the law can take and earmark funds. Government can send it to the Zilla Parishad and get the work executed from the Zilla Parishad itself. ಇದನ್ನು ಇವರು ಹೇಳಿದರು. ಆವರು ಹೇಳಿದರು, ಮೇಲ್ದರ್ಜೆಗೆ ಏರಿಸಲು, upgrading, PWD can takeover ಎಂದು ಆದ್ದರಿಂದ ಇದು

ಪರಸ್ಪರವಾಗಿ ಪೂರಕವಾಗಿದೆಯೇ ಹೊರತು ಆದರಲ್ಲಿ ಏನೂ ದ್ವಂದ್ವ ಇಲ್ಲವೆಂಬುದನ್ನು ನಾನು ಸ್ಪಷ್ಟ ಪಡಿಸುತ್ತಿದ್ದೇನೆ.

MR. SPEAKER.—Mr. Basavalingappa, do you have anything to add ?

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ತಮಗೆ ವಂದನೆಗಳು. ನನ್ನನ್ನು ನೋಡಿಬಿಟ್ಟು ನೀವು ಕರೆದ ಹಾಗೆ ಕಾಣುತ್ತದೆ. ಈಗ ಆಪರೇಟು ಪೂರಕವಾಗಿದ್ದರೆ ನಾನೂ ಸಹ ಪೂರಕವಾಗಿ ಒಂದೆರಡು ಮಾತುಗಳನ್ನು ಆಡುತ್ತೇನೆ. ವಿಕೇಂದ್ರೀಕರಣ ಆಗಬೇಕೆಂದು ಎಲ್ಲರ ಇಚ್ಛೆ ಇತ್ತು. ವಿಕೇಂದ್ರೀಕರಣ ಆಗಿದೆಯೋ ಇಲ್ಲವೋ ಎನ್ನುವುದರ ಬಗ್ಗೆ ನನ್ನ ಮತ ಸ್ಪಷ್ಟ. ಅದು ಯಾವತ್ತೂ ಸ್ಪಷ್ಟ. ೧೮೨೯ನೇ ಜಿಲ್ಲಾ ಪರಿಷತ್ ಆಕ್ಟ್ ಪ್ರಕಾರ ಏನು ಒಂದು ಅಧಿಕಾರ ವರ್ಗಾವಣೆ ಆಗಿದೆಯೆಂದು ಭಾವನೆ ಮಾಡಿದ್ದೇವೆ. ಅದು ಎಂದೂ ಆಗಿಲ್ಲ. ಅದಕ್ಕೆ ವರ್ಗಾವಣೆ ಎಂದರೆ assigning, entrusting and endowment ಎಂಬ ಮೂರು ಪದಗಳನ್ನು ಉಪಯೋಗಿಸಿದ್ದಾರೆ. Article 40 Endowmentರಲ್ಲಿ ಏನು ಉಪಯೋಗಿಸಿದ್ದೇವೆ ಎಂದರೆ, Government can endow any power to any subordinate body–to the village panchayat. ಅಂತ ಇದೆ. ಅದರ ಪ್ರಕಾರ endow ಮಾಡಬೇಕೇ ಹೊರತಾಗಿ, ಅವರು ಎಲ್ಲ ವರ್ಗಾವಣೆ ಮಾಡಿದ್ದೇವೆ ಎಂದು ಹೇಳತಕ್ಕದ್ದು ರಾಜ್ಯಾಂಗಕ್ಕೆ ವಿರೋಧವಾಗಿರತಕ್ಕಂಥಾದ್ದು. ಇದು ನನ್ನ ಸ್ಪಷ್ಟವಾಗಿರತಕ್ಕಂಥ ಮತ. Whether the executive power of the State can be distributed to any other subordinate authority? My answer is simple "No", because executive authority vests in the Central Government and it vests in the State Government and not other bodies under the Constitution. I don't know whether the Constitution is going to be changed, but the executive authority vests in these two governments. Whether the Central Government or the State Government can transfer the executive powers to any subordinate body? My answer is simple "No", because unless and until the Constitution is changed we cannot do it. About decentralisation, whether we can decentralise the powers of the State, I said it is not possible. ಯಾರು ಜಿಲ್ಲಾ ಮಟ್ಟದಲ್ಲಿ, ಜಿಲ್ಲಾಪರಿಷತ್ತಿನಲ್ಲಿ ಸದಸ್ಯರಾಗಿದ್ದಾರೆ, ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ, ಅಧ್ಯಕ್ಷರಾಗಲೀ, ಮಂಡಲ ಪ್ರಧಾನರಾಗಲೀ ಏನಿದ್ದಾರೆ, ಅವರು ಅಲ್ಲಿ ಏನು ನಡವಳಿಕೆ ಆಗುತ್ತದೆ. ಅದಕ್ಕೆ ಅವರು ಜನರಿಗೆ ಜವಾಬು ಕೊಡಬಹುದೇ ಹೊರತಾಗಿ ಈ ಸದನದಲ್ಲಿ ಬಂದು ಕೊಡುವುದಕ್ಕೆ ಅವರಿಗೆ ಅಧಿಕಾರ ಇಲ್ಲವೇ ಇಲ್ಲ ಜಿಲ್ಲಾ ಪರಿಷತ್ತುಗಳಲ್ಲಿ ಆಗುಹೋಗುಗಳ ಬಗ್ಗೆ ಉತ್ತರ ಕೊಡತಕ್ಕಂಥ ಅವಕಾಶ ಯಾರಿಗೆ ಇದೆ? ಜಿಲ್ಲಾಪರಿಷತ್ತಿನ ಆಗುಹೋಗುಗಳ ಬಗ್ಗೆ ಉತ್ತರ ಕೊಡುವ ಅವಕಾಶ ಈ ಸದನಕ್ಕೆ ಇದೆ ಮತ್ತು ಮಂತ್ರಿ ಮಂಡಲಕ್ಕೆ ಇದೆ. ಆದರೆ ಜಿಲ್ಲಾಪರಿಷತ್ತಿನ ಮೆಂಬರ್ಸ್ ಅಂದರೆ ಅಧ್ಯಕ್ಷರು ಇಲ್ಲಿ ಬಂದು ಉತ್ತರ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಅವರಿಗೆ ಎಷ್ಟು ವಿಕೇಂದ್ರೀಕರಣದ ಅಧಿಕಾರವನ್ನು ಕೊಡಬಹುದೋ ಅಷ್ಟು ಕೊಡಬಹುದು. ಆದಕ್ಕಾಗಿಯೇ ಸರ್ಕಾರದವರು ೧೯೮೬ನೇ ಇಸವಿಯಲ್ಲಿ ಒಂದು ಹುಕುಂ ಮಾಡಿದ್ದಾರೆ. Entrustment of on going works ಎಂದು ಸರ್ಕಾರ ಆರ್ಡರ್ ಮಾಡಿದ್ದಾರೆ. ನಾವು ಯಾವುದನ್ನು ಆಸೈನ್ ಮಾಡುತ್ತಿದ್ದೇನೆ? ಸೆಕ್ಷನ್ ೧೮೨, ೩೧೮ ಮತ್ತು ೧೮೪ರ ಪ್ರಕಾರ, ಅವರಿಗೆ ಅಧಿಕಾರವನ್ನು ಯಾವ ಯಾವ ರೀತಿಯಲ್ಲಿ ಕೊಡಬಹುದು ಎನ್ನುವುದರ ಬಗ್ಗೆ ನಿಗದಿ ಮಾಡಿದ್ದಾರೆ. ಅದನ್ನು ಬಿಟ್ಟು ನಾವು ಹೋಗುವುದಕ್ಕಾಗುವುದಿಲ್ಲ. ವಿಕೇಂದ್ರೀಕರಣದಲ್ಲಿ ಯಾರು ಯಾರಿಗೆ ಅಭಿಮಾನ ಇದೆ, ಯಾರು ಯಾರು ಈ ಕಾನೂನಿಗೆ ಕಾರಣ ಕರ್ತರಾಗಿದ್ದಾರೆ, ಅವರಲ್ಲಿ ನಾನು ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ತಾವೇ ಯೋಚನೆ ಮಾಡಿ, ಇನ್ನೊಂದು ಸಾರಿ ಆಲೋಚನೆ ಮಾಡಿ. ಇವರಿಗೆ ವಿಕೇಂದ್ರೀಕರಣದ ಅಧಿಕಾರವನ್ನು ಕೊಡುವುದಾದರೆ, ರಾಜ್ಯಾಂಗದತ್ತವಾಗಿ ಸಂವಿಧಾನವನ್ನು ಬದಲಾವಣೆ ಮಾಡಿ ಕೊಡಬಹುದೇ ಹೊರತು, ಬೇರೆ ಬೇರೆ ರೀತಿಯಿಂದ ಕೊಡುವುದಕ್ಕಾಗುವುದಿಲ್ಲ. ಕಾರಣ ಏನೆಂದರೆ, ಈ ಸದನದಲ್ಲಿ ಜಿಲ್ಲಾ ಪರಿಷತ್‌ಗಳ ಆಗುಹೋಗುಗಳ ಬಗ್ಗೆ ತಮಗೆಲ್ಲಾ ಅವರು ಯಾರೂ ಕೂಡ ಉತ್ತರ ಕೊಡುವುದಕ್ಕಾಗುವುದಿಲ್ಲ. ನಾವೇ ಕೊಡಬೇಕು. ಮಾನ್ಯ ಘೋರ್ಪಡೆಯವರೇ ಕೊಡಬೇಕು.

ಅಧ್ಯಕ್ಷರು.—ಅವರೇ ಹೇಳಬೇಕು. ನೀವೇ ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅವರು ಬಂದು ಕೊಡುವುದಿಲ್ಲ. ಆದ್ದರಿಂದ ಅವರಿಗೆ ಸರ್ವ ವ್ಯಾಪಕವಾಗಿರತಕ್ಕಂಥ ಎಕ್ಸಿಕ್ಯುಟಿವ್ ಅಥಾರಿಟಿ ಏನಿದೆ, ಆ ಅಧಿಕಾರವನ್ನು ಕೊಡುವುದಕ್ಕಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ವಿಚಾರ ಮಾಡಿ ವ್ಯವಹರಿಸಿದರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

SRI D. B. CHANDREGOWDA.—He has raised the vital question. I will pass on one information. The Central Cabinet has taken a decision to take up this issue in the next session of Parliament. Till such time I think it is better to withhold our debate. ಈ ಸದನದ ಒಂದು ತೀರ್ಮಾನವನ್ನು ರಾಜ್ಯಪಾಲರು ವಿಶ್ಲೇಷಣೆ ಮಾಡಿ, ಕೇಂದ್ರದ ಕಾನೂನು ಮಂತ್ರಿಗಳು ಮಧ್ಯಸ್ಥಿಕೆ ವಹಿಸಿ, ಈ ಶಾಸನದ ಬಗ್ಗೆ ಏನಿದೆ, ಏನಿಲ್ಲ ಎನ್ನುವುದನ್ನು ನೋಡಿ, ರಾಷ್ಟ್ರಾಧ್ಯಕ್ಷರಿಂದ ಮಾನ್ಯತೆ ಪಡೆದಿರುವಂಥ ಶಾಸನವನ್ನು. ಇದು ರಾಜ್ಯಾಂಗಕ್ಕೆ ವಿರೋಧ ಎಂದು ಹೇಳಿದರೆ..... this is what exactly he says. He said it. Entirely the constitutional machinery known to the democratic set up has gone through it. It is not correct on our part to take up this issue at this time.

ಶ್ರೀ ಕೆ. ಲಕ್ಕಪ್ಪ.—ರಾಜ್ಯಾಂಗಕ್ಕೆ ವಿರೋಧ ಎಂದು ಯಾರೂ ಹೇಳಿಲ್ಲ. Z. P. s are not functioning according to the regulations of the Constitution, ಎಂದು ಹೇಳಿದ್ದೇ ಹೊರತು ರಾಜ್ಯಾಂಗಕ್ಕೆ ವಿರೋಧ ಎಂದು ಯಾರೂ ಹೇಳಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ವಿಷಯಕ್ಕೆ ನಾನು ಮಂತ್ರಿಯಾಗಿರುವುದರಿಂದ, ಸರ್ಕಾರದ ವತಿಯಿಂದ, ನಾನು ಜವಾಬ್ದಾರಿಯಿಂದ ನಿಜವಾದ ಪೊಸಿಷನ್ ಏನು ಎನ್ನುವುದನ್ನು ತಿಳಿಸಬೇಕಾದುದು ನನ್ನ ಕರ್ತವ್ಯ. ಜಿಲ್ಲಾಪರಿಷತ್ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸರ್ಕಾರ ಏನು ೧೦ ರೂಪಾಯಿ ಪರ್ ಕ್ಯಾಪಿಟಾ ಗ್ರಾಂಟ್ ಕೊಡುತ್ತದೆ ಅದನ್ನು ಬಿಟ್ಟರೆ, ಸ್ವಂತ ಹಣ, ಸಿಬ್ಬಂದಿ ಬಹಳ ಕಡಿಮೆ. ಇದೆ. ಅವರ ಕಡೆ ಇರತಕ್ಕಂಥ ಹಣ, ಸಿಬ್ಬಂದಿ ಬಹಳ ಮಟ್ಟಿಗೆ ಸರ್ಕಾರದ್ದು. ೫೫೦ ಕೋಟಿ ರೂಪಾಯಿ ಡೆವಲಪ್‌ಮೆಂಟ್‌ಗಾಗಿ ಮತ್ತು ಏಳುನೂರು ಕೋಟಿ ನಾನ್ ಪ್ಲಾನ್‌ನಲ್ಲಿ, ಒಟ್ಟು ೧೨೫೦ ಕೋಟಿ ರೂಪಾಯಿಗಳನ್ನು ಸರ್ಕಾರ ಅವರಿಗೆ ಕೊಡುತ್ತಿದೆ. ಆದರೆ ಈ ಹಣವನ್ನು ಸರ್ಕಾರದ ವಿಚಾರದ ಪ್ರಕಾರ, ಸರಕಾರದ ಯೋಜನೆಗಳ ಪ್ರಕಾರ ಖರ್ಚು ಮಾಡುವುದಕ್ಕೋಸ್ಕರ ಅವರಿಗೆ ಕೊಟ್ಟಿರುತ್ತದೆಯೇ ಹೊರತು ಅವರು ತಮಗೆ ಹೇಗೆ ಬೇಕೋ ಹಾಗೆ ಖರ್ಚು ಮಾಡುವುದಕ್ಕೋಸ್ಕರ ಅಲ್ಲ. ಅದನ್ನು ಖರ್ಚು ಮಾಡುವುದಕ್ಕೋಸ್ಕರ ಸಿಬ್ಬಂದಿ ಏನು ಬೇಕೋ ಅದನ್ನೂ ಕೂಡಾ ದೊಡ್ಡ ಪ್ರಮಾಣದಲ್ಲಿ ನಾವು ಕೊಟ್ಟಿದ್ದೇವೆ. ಕ್ಲಾಸ್–ಎ ೭ ಸಾವಿರ, ಕ್ಲಾಸ್–ಬಿ, ೫ ಸಾವಿರ, ಸಿ ಅಂಡ್ ಡಿ ಆಫೀಷಿಯಲ್ಸ್ ೨ ಲಕ್ಷಕ್ಕೂ ಮೇಲ್ಪಟ್ಟಿದ್ದಾರೆ. ಇದನ್ನು ಸರಕಾರ ಕೊಟ್ಟಿರತಕ್ಕಂಥಾದು. ನಮ್ಮ ಯೋಜನೆಗಳನ್ನು ಚೆನ್ನಾಗಿ ಅನುಷ್ಠಾನ ಮಾಡಲಿ ಎಂದು ನಾವು ಏನು ಹಣವನ್ನು ಕೊಟ್ಟಿದ್ದೇವೆ, ಅದನ್ನು ನಮ್ಮ ಯೋಜನೆಗಳ ಪ್ರಕಾರವೇ ಅವರು ಖರ್ಚು ಮಾಡಬೇಕಾಗುತ್ತದೆ. ರಸ್ತೆಗಳ ಮಟ್ಟಿಗೆ ಹೇಳಬೇಕಾದರೆ, ಯಾವ ಯಾವ ರಸ್ತೆಗಳನ್ನು ಅವರ ವ್ಯಾಪ್ತಿಗೆ ಸೇರಬೇಕು ಎಂದು ಒಂದು ತೀರ್ಮಾನ ಮಾಡಿರುತ್ತೇವೆ. ಅದರ ಉದ್ದೇಶ ಇಷ್ಟೆ. ಜಿಲ್ಲಾ ಮಟ್ಟದಲ್ಲಿರತಕ್ಕ ರಸ್ತೆಗಳ ವಿಚಾರ ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಯಾವ ರಸ್ತೆಗೆ ಆದ್ಯತೆ ಕೊಡಬೇಕು, ಯಾವ ರಸ್ತೆಯನ್ನು ಮೊದಲು ರಿಪೇರಿ ಮಾಡಬೇಕು ಎನ್ನುವುದು ಅವರಿಗೆ ಗೊತ್ತಿರುವುದರಿಂದ ಅವರಿಗೆ ಇದರ ಜವಾಬ್ದಾರಿಯನ್ನು ಕೊಟ್ಟಿರತಕ್ಕದ್ದು. ಬೇರೆ ರಸ್ತೆಗಳು ಅಂದರೆ ನ್ಯಾಷನಲ್ ಹೈವೇ, ಸ್ಟೇಟ್ ಹೈವೆಗಳು ಪಿ. ಡಬ್ಲ್ಯು. ಡಿ. ಕೈಯಲ್ಲಿರುತ್ತವೆ. ಅದರಲ್ಲೇನಾದರೂ ಮಾರ್ಪಾಡು ಮಾಡುವ ವಿಚಾರ ಸರಕಾರಕ್ಕೆ ಇದ್ದರೆ, ಸರಕಾರಕ್ಕೆ ಸಂಪೂರ್ಣ ಅಧಿಕಾರ ಇದೆ. ಯಾವ ಕ್ಯಾಟಗರಿಯಲ್ಲಿ ನೇರವಾಗಿ ಸರಕಾರ ಮಾಡಬೇಕು, ಯಾವುದನ್ನು ಜಿಲ್ಲಾ ಪರಿಷತ್ ಮುಖಾಂತರ ರಿಪೇರಿ ಮಾಡಿಸಬೇಕೆಂಬುದನ್ನು ತೀರ್ಮಾನ ಮಾಡಲಿಕ್ಕೆ, ಈ ಕ್ಯಾಟಗರಿಯಲ್ಲಿ ಚೇಂಜ್ ಮಾಡುವುದಕ್ಕೆ, ಮಾರ್ಪಾಡು ಮಾಡುವುದಕ್ಕೆ ಸಾಕಷ್ಟು ಅಧಿಕಾರ ಸರಕಾರಕ್ಕೆ ಇದೆ. ಆದಕಾರಣ, Bulk of the activities such as officials, finances etc., are delegated by the Government, obviously they have been given tied grants. There

is no option. they have to spend it as a planned expenditure. They are not united grants. They are tied grants. Only united grants that is given to them is per capita grants.

ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ

೫೪೯ (೧೧೫೯) ಶ್ರೀ ಬಾದರಲ್ಲಿ ಹಂಪನಗೌಡ (ಸಿಂಧನೂರು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದಲ್ಲಿ ೧೯೮೬ ರಿಂದ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಖಾಯಂಗೊಳಿಸಲಾಗಿದೆಯೇ ?

ಆ) ಹಾಗಿಲ್ಲದಿದ್ದಲ್ಲಿ ಖಾಯಂಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಇ) ೧೯೮೯ ಮಾರ್ಚ್ ತಿಂಗಳಲ್ಲಿ ನಡೆದ ಆಡಳಿತ ಮಂಡಳಿಯಲ್ಲಿ ಅಧಿಕಾರೇತರ ನಿರ್ದೇಶಕ? ಸಮ್ಮುಖದಲ್ಲಿ ದಿನಗೂಲಿ ನೌಕರರ ವಿಷಯವಾಗಿ ಕೈಗೊಂಡ ನಿರ್ಣಯವನ್ನು ಜಾರಿಗೊಳಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಇದನ್ನು ಜಾರಿಗೊಳಿಸಲು ಕೈಗೊಂಡ ಕ್ರಮವೇನು ?

ಉ) ೧೯೮೫ರ ಡಿಸೆಂಬರ್ ತಿಂಗಳಿಗೆ ಮುಂಚೆ ಸೇರಿದ ದಿನಗೂಲಿ ನೌಕರರನ್ನು ೧೯೮೮ರ ಜನವರಿಯಲ್ಲಿ ಖಾಯಂಗೊಳಿಸಿರುತ್ತೀರಿ, ಆದರೆ ೧೯೮೬ ರಿಂದ ನಿಗಮದಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರನ್ನು ಇದುವರೆವಿಗೂ ಏಕೆ ಖಾಯಂ ಗೊಳಿಸಿಲ್ಲ ?

ಶ್ರೀ ಅಜೀಜ್ ಸೇಟ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಇಲ್ಲ.

ಆ) ನಿಗಮದ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ನಿಗಮದ ಚಟುವಟಿಕೆಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾದಾಗ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಇ) ೧೯೮೯ರ ಮಾರ್ಚ್ ತಿಂಗಳಲ್ಲಿ ನಿಗಮದ ಆಡಳಿತ ಮಂಡಳಿ ಸಭೆಯು ನಡೆದಿರುವುದಿಲ್ಲ, ಹಾಗೂ ಈ ಬಗ್ಗೆ ಯಾವ ನಿರ್ಣಯವನ್ನು ಸಹ ತೆಗೆದುಕೊಂಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಈಗಾಗಲೇ ಎಲ್ಲಾ ವರ್ಗಗಳಲ್ಲಿ ಸಾಕಷ್ಟು ಸಿಬ್ಬಂದಿ ಇರುವುದರಿಂದ ಹಾಗೂ ನಿಗಮದ ಚಟುವಟಿಕೆಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗದೆ ಇರುವುದರಿಂದ ಮತ್ತು ನಿಗಮದ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಖಾಯಂ ಮಾಡುವ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಉತ್ತರಗಳನ್ನು ಒದಗಿಸಲಾಗಿದೆ.

ಶ್ರೀ ಬಾದರಲಿ ಹಂಪನಗೌಡ.—ಉತ್ತರಗಳು ನನಗೆ ಬಂದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಸದಸ್ಯರಿಗೆ ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್.—ಸರಕಾರದಪರ ಹತ್ತಿರ ಇರುವುದು ಒಂದೇ ಉತ್ತರ.

ಅಧ್ಯಕ್ಷರು.—ಓದಿ ಬಿಡಿ. ಹೌಸ್‌ಗೆಲ್ಲಾ ಗೊತ್ತಾಗಲಿ.

(ಮಾನ್ಯ ಸಚಿವರು ಉತ್ತರದ ಒಂದು ಪ್ರತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿದರು)

ಅಧ್ಯಕ್ಷರು.—ನಿಮ್ಮ ಹತ್ತಿರ ಉತ್ತರ ಇಲ್ಲ. ಉತ್ತರ ಅವರಿಗೇ ಬೇಕು, ಅವರಿಗೇ ಕೊಡಿ.

SRI M. VEERAPPA MOILY,—It has been cyclostyled and copies have been given to your office. Copies have been submitted to the Legislature Secretary for distribution among hon'ble Members in the house.